<u>ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಸಾಗರ.</u>

ದಿನಾಂಕ: **೧೫** ನೇ ಅಕ್ಟೋಬರ್ **೨೦೨೦**

**ಅಸಲು ದಾವೆ ನಂ: ೦೫/೨೦೨೦**

ಶ್ರೀಮತಿ ಸುವರ್ಣ ಗೌರಮ್ಮ : ವಾದಿ

ಮತ್ತು ಇನ್ನೊಬ್ಬರು

ವಿರುದ್ಧ

ಎಂ.ಕೃಷ್ಣಮೂರ್ತಿ .... ಪ್ರತಿವಾದಿ

**<u>ವಿವಾದಾಂಶಗಳು</u>**

**೧.** ದಿನಾಂಕ **೩-೧೧-೨೦೧೦** ರಂದು ಪ್ರತಿವಾದಿ **೧** ನೇ ವಾದಿಯ ಗಂಡನಿಂದ **ರೂ.೧೫,೦೦೦-೦೦** ಮುಂಗಡ ಹಣ ಪಡೆದು ಎಕರೆ ಒಂದಕ್ಕೆ **ರೂ. ೩,೦೦,೦೦೦-೦೦** ದಂತೆ ದಾವಾ ಅನುಸೂಚಿ ಜಮೀನನ್ನು ಮಾರಾಟ ಮಾಡಲು ಒಪ್ಪಿ ಕ್ರಯ ಒಪ್ಪಂದ ಪತ್ರ ಬರೆದುಕೊಟ್ಟಿರುತ್ತಾರೆ ಎನ್ನುವುದನ್ನು ವಾದಿಗಳು ರುಜುವಾತು ಪಡಿಸಬಲ್ಲರೇ?

**೨.** ವಾದಿಗಳು ತಾವು ದಾವಾ ಅನುಸೂಚಿ ಜಮೀನಿನ ದಿನಾಂಕ **೩-೧೧-೨೦೧೦** ರ ಕ್ರಯಪತ್ರದ ಪ್ರಕಾರ ತಮ್ಮ ಭಾಗದ ಕಾರ್ಯ ಪಾಲನೆ ಮಾಡಲ ಸದಾ ಸಿದ್ಧರಿದ್ದೆವು ಎನ್ನುವುದನ್ನು ವಾದಿಗಳು ರುಜುವಾತು ಪಡಿಸಬಲ್ಲರೇ?

**೩.** ಪ್ರತಿವಾದ ಪತ್ರದ ವಾಕ್ಯವೃಂದ **೧೧** ಮತ್ತು **೧೨** ರಲ್ಲಿ ಹೇಳಿರುವಂತೆ ವಾದಿಗಳು ಮತ್ತು **೧** ನೇ ಪ್ರತಿವಾದಿ ಗಂಡ ಖಾಲಿ ಸ್ಟಾಂಪ್ ಮತ್ತು ದಾಖಲಾತಿ ಪತ್ರಗಳ ಮೇಲೆ ಪ್ರತಿವಾದಿಯ ಸಹಿಗಳನ್ನು ಪಡೆದು ವಾದಿಗಳು ದಿನಾಂಕ **೩-೧೧-೨೦೧೦** ರದು ಎನ್ನುವ ಕ್ರಯಕರಾರು ಪತ್ರವನ್ನು ಸೃಷ್ಟಿ ಮಾಡಿಕೊಂಡಿರುತ್ತಾರೆ ಎನ್ನುವುದನ್ನು ಪ್ರತಿವಾದಿ ರುಜುವಾತು ಪಡಿಸಬಲ್ಲರೇ?

**೪.** ಪ್ರತಿವಾದ ಪತ್ರದ ವಾಕ್ಯವೃಂದ **೧೩** ರಲ್ಲಿ ಹೇಳಿರುವಂತೆ ಈ ದಾವೆ ಅವಶ್ಯಕ ಪಕ್ಷಕಾರರನ್ನು ಸೇರ್ಪಡೆ ಮಾಡದ ಕಾರಣ ಊರ್ಜಿತವಾಗತಕ್ಕದ್ದಲ್ಲ ಎನ್ನುವುದನ್ನು ಪ್ರತಿವಾದಿ ರುಜುವಾತು ಪಡಿಸಬಲ್ಲರೇ?

೫. ಪ್ರತಿವಾದ ಪತ್ರದ ವಾಕ್ಯವೃಂದ ೧೪ ರಲ್ಲಿ ಹೇಳಿರುವಂತೆ ಈ ದಾವೆ ಕಾಲಮಿತಿ ಒಳಗೆ ಸಲ್ಲಿಸದ ಕಾರಣ ಊರ್ಜಿತವಾಗತಕ್ಕದ್ದಲ್ಲ ಎನ್ನುವುದನ್ನು ಪ್ರತಿವಾದಿ ರುಜುವಾತು ಪಡಿಸಬಲ್ಲರೇ?

೬. ವಾದಿಗಳು ದಾವಾ ಪರಿಹಾರಕ್ಕೆ ಅರ್ಹರಾಗಿರುತ್ತಾರೆಯೇ?

೭. ಏನು ಆದೇಶ ಅಥವಾ ಡಿಕ್ರಿ?

(ರಾಘವೇಂದ್ರ ಜಿ. )
ಪ್ರಧಾನ ಹಿರಿಯ ವ್ಯವಹಾರ ನ್ಯಾಯಾಧೀಶರು,
ಸಾಗರ.